ಶೆಟ್ಟರು ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಸಂಜಯ್ ಮುಂದುವರಿಸಿದ, 'ಆನಂದಣ್ಣ, ಹಾಗೆ ಶ್ರಮದಾನ ಮಾಡಿ ಬರುವ ಯುವಕರಿಗೆ ನಾವು ಬಾಬಣ್ಣನಿಗೆ ಚಟ್ಟಂಬಡೆ, ಅವಲಕ್ಕಿ ಇತ್ಯಾದಿ ಮಾಡಲಿಕ್ಕೆ ಹೇಳುವ. ಅದರ ಖರ್ಚೆಲ್ಲ ನಾನು ಕೊಡ್ತೇನೆ. ಹಾಗೇ ಶ್ರಮದಾನದ ನಂತರ ಎಲ್ಲರೂ ದೇವಸ್ಥಾನದ ಹೊರಗೆ ಸೇರಿದರೆ ನಾನು ಹೇಗೆ ಸೋಶಿಯಲ್ ಮೀಡಿಯಾ ಉಪಯೋಗಿಸುವುದು? ಹೇಗೆ ತಮ್ಮ ತಮ್ಮ ಪ್ರೊಫೈಲ್ ಮಾಡುವುದು? ಹೇಗೆ ಬಿಸಿನೆಸ್ ಮಾಡುವುದು ಎಂಬುದನ್ನು ತಿಳಿಸಿಕೊಡ್ತೇನೆ' ಅಂದ.

ಆನಂದಣ್ಣನಿಗೆ ಇದು ಖುಷಿಕೊಟ್ಟಿತು. ಆಶಾಳ ಮುಖದಲ್ಲೂ ಕಳೆಮೂಡಿತು.

ಸಂಜಯ್ 'ಶೆಟ್ರೆ, ನಿಮಗೆ ಇನ್ನೊಂದು ವಿಷಯ ಹೇಳಲಿಕ್ಕೆ ಮರೆತೇಬಿಟ್ಟಿದ್ದೆ. ನಾನು ಇಂಟರ್ನೆಟ್‌ನಲ್ಲಿ ನನ್ನ ಹಾಗಿದ್ದ ಇನ್ನೆರಡು ಜನ ಸ್ವಯಂ ಸೇವಕರನ್ನು ಆಹ್ವಾನಿಸಿದ್ದೇನೆ. ಮುಂದಿನ ವಾರ ಅವರು ಇಲ್ಲಿಗೆ ಬರ್ತಾರೆ. ಒಬ್ಬರು ನಿಮ್ಮಲ್ಲಿ, ಇನ್ನೊಬ್ಬರು ಆನಂದಣ್ಣನವರ ಮನೆಯಲ್ಲಿ ಇರಬಹುದಾ ಹೇಗೆ?' ಕೇಳಿದ.

ಶೆಟ್ಟರು 'ಕಾರಂತರೇ, ಖಂಡಿತ. ಆದ್ರೆ ನಮ್ಮ ಊರಲ್ಲಿ ಎಷ್ಟು ಬೇಕಾದರೂ ಅಷ್ಟು ಸ್ವಯಂ ಸೇವಕರಿದ್ದಾರಲ್ಲಾ? ನನ್ನಲ್ಲಿ ಹೇಳಿದ್ದರೆ ನಾನೇ ಆಯ್ಕೆ ಮಾಡ್ತಿದ್ದೆ' ಅಂದರು.

'ಅದು ಹಾಗಲ್ಲ ಶೆಟ್ರೇ, ಹೊರಗಿನ ಪ್ರಪಂಚಕ್ಕೆ ಸೀತಾಪುರ ಇದೆ ಅಂತ ನಂಬಲಿಕ್ಕೇ ಆಗುವುದಿಲ್ಲ. ಇದೆಲ್ಲ ಸುಳ್ಳು ಕಟ್ಟುಕಥೆ ಅಂತಾರೆ. ಅದಕ್ಕೆ ನಾನು ಹೊರಗಿನ ಜನರನ್ನು ಕರೆತಂದ್ರೆ ಅವರೇ ನೋಡ್ತಾರೆ! ಅಂದುಕೊಂಡೆ. ಅದೂ ಅಲ್ಲದೇ ನಾನು ಸೋಶಿಯಲ್ ಮೀಡಿಯಾ ತಜ್ಞರನ್ನೇ ಆಯ್ಕೆ ಮಾಡ್ತೇನೆ. ಅವರು ನಮ್ಮ ಊರಿನವರಿಗೆ ಸೋಶಿಯಲ್ ಮೀಡಿಯಾದಲ್ಲಿ ಹೇಗೆ ಬಿಸಿನೆಸ್ ಮಾಡುವುದು ಅಂತ ಹೇಳಿಕೊಡ್ತಾರೆ' ಅಂದ.

ಆನಂದಣ್ಣ 'ಅಲ್ಲ ಕಾರಂತರೇ, ನಿಮ್ಮ ತಲೆಗೆ ಕೊಡಬೇಕು. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡಿತೀರಿ ನೀವು!' ಅಂದರು.

ಸಂಜಯ್ ಮುಖದಲ್ಲಿ ಮುಗುಳ್ನಗೆ ಕಂಡಿತು.

ಆ ವೇಳೆಗೆ ಕಾಟೇಜ್‌ನ ಕೆಲಸ ಮಾಡಿಕೊಂಡಿದ್ದ ಕೆಲಸಗಾರರು ಅಲ್ಲಿಗೆ ಬಂದರು. ಶೆಟ್ಟರು ಕೆಲಸ ಹೇಗೆ ಮುಂದುವರಿದಿದೆ ಎಂದು ಕೇಳಿದರು. ಅದಕ್ಕೆ ಅವರು ಇನ್ನು ನಾಲ್ಕು ವಾರದಲ್ಲಿ ಕಾಟೇಜ್ ಸಿದ್ಧವಾಗುವುದಾಗಿಯೂ ಹೇಳಿದರು.

ಪ್ರಭಾಕರ ಕ್ಯಾಮೆರಾ ಕೈಯಲ್ಲಿ ಹಿಡಿದು ಯುದ್ಧಕ್ಕೆ ಹೊರಟ ಯೋಧನ ಹಾಗೆ ನಿಂತಿದ್ದ. ಎಲ್ಲರೂ ಕಾಟೇಜ್ ಕಡೆಗೆ ಹೊರಟರು. ಅಲ್ಲಿಯ ಬೆಳವಣಿಗೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲಾಯಿತು.

ಆನಂದಣ್ಣ ಆಗಾಗಲೇ ಊರ ಕಡೆಗೆ ಹೋಗಿ ಯುವಕರನ್ನು ಸೇರಿಸಲು ಪ್ರಾರಂಭ ಮಾಡಿದ್ದರು. ಆವತ್ತೇ ಮಧ್ಯಾಹ್ನ 'ಗುದ್ದಲಿ ಪೂಜೆ' ಅಂತ ನಿರ್ಧಾರವೂ ಆಯಿತು. ಮಧ್ಯಾಹ್ನ ಸೂರ್ಯ ನೆತ್ತಿಯ ಮೇಲೆ ಬರುವಾಗ ದೇವಸ್ಥಾನದ ಹೊರಗೆ ಸುಮಾರು ಐವತ್ತು ಹುಡುಗರು ಸೇರಿದ್ದರು. ಬಾಬಣ್ಣ ಆಗಲೇ ಪ್ರತ್ಯಕ್ಷನಾಗಿದ್ದ. ಆನಂದಣ್ಣ ಮತ್ತು ಶೆಟ್ಟರು ಯುವಕರನ್ನು ಉದ್ದೇಶಿಸಿ ಮಾತನಾಡಿದರು. ರಸ್ತೆ ಹೇಗೆ ಮಾಡಬೇಕು, ಎಲ್ಲಿಂದ ಹೋಗಬೇಕು ಇತ್ಯಾದಿ ಮಾಹಿತಿ ನೀಡಿದರು.

ಎಲ್ಲರು ತಂದಿದ್ದ ಕತ್ತಿ, ಗುದ್ದಲಿ ಮತ್ತು ಇತರ ವಸ್ತುಗಳನ್ನು ಒಟ್ಟಿಗೆ ಇಡಲಾಯಿತು. ಅದಕ್ಕೆ ಆಶಾ ಆರತಿ ಮಾಡಿದಳು. ಬಾಬಣ್ಣ ತೆಂಗಿನಕಾಯಿ ಹಾಕಿದ ಸಿಹಿ ಅವಲಕ್ಕಿ ಪ್ರಸಾದ ಮಾಡಿದ್ದ. ಸೇರಿದವರು ಪ್ರಸಾದ ಸ್ವೀಕರಿಸಿ ಕೆಲಸಕ್ಕೆ ತಯಾರಾದರು. ಪ್ರಭಾಕರನಿಗೋ ಒಂದೇ ಕೆಲಸ. ಈ ಯಾವುದೊಂದು ಕ್ಷಣವೂ ತಪ್ಪದ ಹಾಗೆ ಕ್ಯಾಮೆರಾದಲ್ಲಿ ಸೆರೆಹಿಡಿಯುವುದು!

ಎಲ್ಲಾ ಯುವಕರು ಕಾಡಿಗೆ ಮುತ್ತಿಗೆ ಹಾಕಿದ ಹಾಗೆ ರಸ್ತೆ ಮಾಡಲು ಪ್ರಾರಂಭಿಸಿದರು.

ಸಂಜೆ ಎಲ್ಲ ಯುವಕರು ಮತ್ತೆ ದೇವಸ್ಥಾನದ ಹೊರಗಡೆ ಸೇರಿದರು. ಬಾಬಣ್ಣ ಎಲ್ಲರಿಗೆ ಬೇಕಾದಷ್ಟು ಚಟ್ಟಂಬಡೆ ಸಿದ್ಧಪಡಿಸಿ, ಅಲ್ಲಿದ್ದವರು ಬಾಬಣ್ಣನ ಚಟ್ಟಂಬಡೆ ತಿಂದು ಬಾಯ್ತುಂಬ ಹೊಗಳಿದರು. ಸಂಜಯ್ ಚಟ್ಟಂಬಡೆ ಕೈಯಲ್ಲಿ ಹಿಡಿದು ಈ ಹಿಂದೆ ಆದ ಹೊಟ್ಟೆ ನೋವು ನೆನಪಾಗಿ ಆತಂಕಗೊಂಡ. ಶಾಸ್ತ್ರಿಗಳು ಕೊಟ್ಟ ಮದ್ದು, ಮೂಸಿದ ಬೇರು ಮತ್ತೆ ಮುಂದೆ ಬಂದು ಧೈರ್ಯಪಟ್ಟ. ಆಶಾಳಿಗೆ ಇದು ಅರ್ಥವಾಗಿ ಆಕೆ ಮುಗುಳ್ನಕ್ಕಳು. ಸಂಜಯನಿಗೆ ಮುಜುಗರವಾದರೂ ಕೈಯಲ್ಲಿದ್ದ ಚಟ್ಟಂಬಡೆ ಬಾಯಿಗೆ ಹಾಕಿದ.

ಸೋಶಿಯಲ್ ಮೀಡಿಯಾ ಕ್ಲಾಸ್ ಪ್ರಾರಂಭವಾಯಿತು.

ಸಂಜಯ್ ಫೇಸ್‌ಬುಕ್, ಯುಟ್ಯೂಬ್, ಇನ್ಸ್‌ಸ್ಟಾಗ್ರಾಂ ಇತ್ಯಾದಿ ಅಪ್ಲಿಕೇಶನ್‌ಗಳನ್ನು ತೋರಿಸಿ ಅವುಗಳಲ್ಲಿ ಏನಿದೆ, ಅವುಗಳಲ್ಲಿ ಹೇಗೆ ತಮ್ಮ ಪ್ರೊಫೈಲ್ ಮಾಡುವುದು ಇತ್ಯಾದಿ ವಿವರಿಸಿದ. ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಡಿಸ್ನಿ ಪ್ಲಸ್, ಹೆಚ್‌ಬಿಒ, ಡಿಸ್ಕವರಿ ಇತ್ಯಾದಿ ಕಂಟೆಂಟ್ ಪ್ಲಾಟ್‌ಫಾರ್ಮ್‌ಗಳನ್ನೂ ತೋರಿಸಿದ. ಆಶಾ ಬಹಳ ಗಮನ ಕೊಟ್ಟು ಸಂಜಯ್ ಹೇಳುವುದನ್ನು ಕೇಳಿದಳು.

ಇದಾಗಿ ಒಂದು ವಾರದಲ್ಲಿ ಸೀತಾಪುರದ ದಟ್ಟ ಕಾಡಿನ ನಡುವೆ ಸಣ್ಣದಾದ ಕಾಲುದಾರಿ ಉದ್ಭವಿಸಿತು. ದಿನದಿಂದ ದಿನಕ್ಕೆ ಆ ಕೆಲಸ ರಭಸಗೊಂಡು ಅದು ಮುಂದುವರಿಯುತ್ತಾ ಗುಡ್ಡದ ಕೆಳಬದಿಯ ತನಕ ಮುಂದುವರಿಯಿತು. ಕೆಲಸ ಮುಗಿಯುತ್ತಾ ಬಂದಷ್ಟೂ ಯುವಕರ ಉಲ್ಲಾಸ ಹಾಗೂ ಕೆಲಸದ ವೇಗ ಹೆಚ್ಚುತ್ತಿತ್ತು.

ಆಶಾಳಿಗೆ ಈಗ ಸೆಲ್ ಫೋನ್ ಜೊತೆಗೆ ಲ್ಯಾಪ್‌ಟಾಪ್ ಉಪಯೋಗಿಸುವುದೂ ಗೊತ್ತಾಗಿತ್ತು. ಪ್ರತೀ ದಿನ ಸಂಜೆ ಆಶಾ ಮತ್ತು ಪ್ರಭಾಕರ ತಾವು ಸೆರೆ ಹಿಡಿದ ಫೋಟೊ ವಿಡಿಯೊಗಳನ್ನು ಸಂಜಯನ ಕಂಪನಿಗೆ ಕಳುಹಿಸುತ್ತಿದ್ದರು. ಹಾಗೇ ಪ್ರತೀ ದಿನ ಸಂಜಯ್, ಶೆಟ್ಟರು ಮತ್ತು ಆನಂದಣ್ಣನ ಇಂಟರ್‌ವ್ಯೂ ಆಗುತ್ತಿತ್ತು. ಅವುಗಳನ್ನು ಪ್ರಕಟಣೆಗಾಗಿ ಸಂಜಯನ ಕಂಪನಿಗೆ ಕಳುಹಿಸಲಾಗುತ್ತಿತ್ತು.

'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದ ಮೂರನೇ ವಾರದ ಸಮಯಕ್ಕೆ ಸೀತಾಪುರಕ್ಕೆ ದಾರಿ ಕಾಣತೊಡಗಿತು. ಸೀತಾಪುರದ ಜನ ಹೊರಗಿನ ಸೋಶಿಯಲ್ ಮೀಡಿಯಾ ಜಗತ್ತಿನಲ್ಲಿ ಕಾಣಿಸತೊಡಗಿದರು. ಸಂಜಯ್ ತನ್ನ ಮುಂದಿನ ಹೆಜ್ಜೆ ಹಾಕಲು ಮುಂದಾದ. ಸೋಶಿಯಲ್ ಮೀಡಿಯಾದಲ್ಲಿ ಸೀತಾಪುರಕ್ಕೆ ಬರುವವರ ಆಯ್ಕೆಗಾಗಿ ವೋಟಿಂಗ್ ಶುರುವಾಯ್ತು. ಎಂತಹ ಜನರನ್ನು ಸೀತಾಪುರಕ್ಕೆ ಕಳುಹಿಸಬೇಕು ಎಂಬ ಚರ್ಚೆ ಜೋರಾಗಿ ನಡೆಯಿತು. ಬಹಳ ಚರ್ಚೆ ಮತ್ತು ಸ್ಪರ್ಧೆಯ ನಂತರ ಇಬ್ಬರ ಆಯ್ಕೆಯಾಯಿತು.

ಹುಡುಗ ಸಂದೇಶ್ ಟ್ರಾವೆಲ್ ಬ್ಲಾಗರ್ ಆಗಿದ್ದ. ಅವನು ಊರೂರಿಗೆ ಹೋಗಿ ಆ ಊರಿನ ವಿಶೇಷಗಳ ಬಗ್ಗೆ ಬರೆಯುವವನಾಗಿದ್ದ. ಅವನಿಗೆ ವಿಡಿಯೊ ಎಡಿಟಿಂಗ್ ಚೆನ್ನಾಗಿ ಬರುತ್ತಿತ್ತು. ಹುಡುಗಿ ನವ್ಯ ರೇಡಿಯೊ ಜಾಕಿ ಮತ್ತು ಫ್ಯಾಷನ್ ಬ್ಲಾಗರ್ ಆಗಿದ್ದಳು. ಅವಳಿಗೆ ಜನರ ಸಂದರ್ಶನ ಮಾತುಕತೆ ಅಂದರೆ ಬಹಳ ಇಷ್ಟದ್ದು. ಇಬ್ಬರಿಗೂ ಲಕ್ಷಾಂತರ ಜನ 'ಫಾಲೋವರ್ಸ್' ಇದ್ದರು. ಅವರ ಆಯ್ಕೆಯಾದದ್ದು ಇಂಟರ್ನೆಟ್‌ನಲ್ಲಿ ಬಹಳ ದೊಡ್ಡ ಸುದ್ದಿಯಾಯಿತು, ಅವರ ಅನುಯಾಯಿಗಳು 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮವನ್ನು ನೋಡಲು ಪ್ರಾರಂಭ ಮಾಡುವುದರಿಂದ ಕಾರ್ಯಕ್ರಮದ ವೀಕ್ಷಕರ ಸಂಖ್ಯೆ ಹೆಚ್ಚಾಯಿತು.

ಅವರು ಮುಂದಿನವಾರ ಸೀತಾಪುರಕ್ಕೆ ಬರುವುದಾಗಿ ನಿರ್ಧಾರವಾಯ್ತು. ಸಂದೇಶ್ ಶೆಟ್ಟರ ಮನೆಯಲ್ಲೂ ನವ್ಯ ಆನಂದಣ್ಣನ ಮನೆಯಲ್ಲೂ ನಿಲ್ಲುವ ನಿರ್ಧಾರವೂ ಆಯಿತು.

## ಎಂಟು

'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದ ನಾಲ್ಕನೇ ವಾರ ಕಾಲಿಟ್ಟಿತು. ಜಗತ್ತಿನಾದ್ಯಂತ ಜನ ಸೀತಾಪುರದ ಪರಿವರ್ತನೆಯನ್ನು ನೋಡಿ ದಂಗಾಗಿದ್ದರು. ಕೇವಲ ಮೂರು ವಾರಗಳಲ್ಲಿ ಸೀತಾಪುರಕ್ಕೊಂದು ದಾರಿ ಸೃಷ್ಟಿಯಾಗಿತ್ತು. ಹಳ್ಳಿಯ ಜನ ಸೋಶಿಯಲ್ ಮೀಡಿಯಾ ಉಪಯೋಗಿಸಲು ಕಲಿತಿದ್ದರು. ನ್ಯೂಸ್ ಪೇಪರ್‌ಗಳು ಈ ಕಾರ್ಯಕ್ರಮದ ಬಗ್ಗೆ ಬರೆಯತೊಡಗಿದವು. ಇಂಟರ್ನೆಟ್‌ನಿಂದ ಈ ತರಹದ ಬದಲಾವಣೆ ತರುವ ಇಂತಹ ಉದಾಹರಣೆ ಅವರು ಬೇರೆಲ್ಲೂ ನೋಡಿರಲಿಲ್ಲ.

ಸೀತಾಪುರದ ಜನಕ್ಕೆ ಈಗ ದಿನಗಳು ಹೋಗುವುದೇ ಗೊತ್ತಾಗುವುದಿಲ್ಲ ಎಂಬಂತಾಯಿತು. ಹಗಲಿನಲ್ಲಿ ಕೆಲವರು ಸೀತಾಪುರದ ರಸ್ತೆ ಮಾಡುವುದರಲ್ಲಿದ್ದರೆ, ಇನ್ನು ಕೆಲವರು ಶೆಟ್ಟರ ಮತ್ತು ಆನಂದಣ್ಣನ ಕಾಟೇಜ್ ಮಾಡುವುದರಲ್ಲಿ ಮಗ್ನರಾಗುತ್ತಿದ್ದರು. ಆದರೆ ಇವರೆಲ್ಲ ಸಂಜೆ ಸಂಜಯನ ಕ್ಲಾಸ್‌ಗೆ ಹಾಜರಾಗುವವರು. ರಾತ್ರಿಯಾಯಿತೆಂದರೆ ಎಲ್ಲರ ಕೈಯಲ್ಲಿ ಸೆಲ್ ಫೋನ್! ಇದರಿಂದಾಗಿ ಗ್ರಾಮದಲ್ಲಿ ಹಲವಾರು ವಾಟ್ಸಾಪ್ ಮತ್ತು ಟೆಲಿಗ್ರಾಂ ಗ್ರೂಪುಗಳಾದವು. ಫೋಟೊಗಳು ವಿಡಿಯೊಗಳು ಆಚೀಚೆ ಓಡಾಡ ತೊಡಗಿದವು.

(ಸಶೇಷ)